


# ಹೇರ್ ಕ್ಲಿಪ್ ಹರವು

ನಾಗವೇಣಿ ಎಂದು ಕರೆಸಿಕೊಳ್ಳುವ ಹೆಣ್ಣುಮಕ್ಕಳು ಹಮ್ಮಿನಿಂದ ಹಿಗ್ಗುತ್ತಿದ್ದ ಕಾಲವೊಂದಿತ್ತು. ಈಗ ಹೇರ್ ಕ್ಲಿಪ್ ತರಹದ ಸಣ್ಣ ಫ್ಯಾಷನ್ ಪರಿಕರವೂ ವಿನ್ಯಾಸ, ವೈವಿಧ್ಯದ ದೃಷ್ಟಿಯಲ್ಲಿ ವ್ಯಾಪಕವಾಗಿರುವ ಕಾಲ. ಓಪನ್ ಹೇರ್ ಬಿಟ್ಟವರು ಚಕ್ಕನೆ ಕೂದಲು ಒಗ್ಗೂಡಿಸಿ, ಕ್ಲಿಪ್ ಹಾಕಿ ಸೌಂದರ್ಯ ತಿಳಿಸುವ ಹೊತ್ತಿನಲ್ಲಿ ಕ್ಲಿಪ್ ಕಡೆಗೊಂದು ಕ್ಲಿಕ್...

■ ವಿಶಾಖ ಎನ್.

ಮಲೆಯಾಳ ಭಾಷೆಯ 'ಲೋಕಾ ಚಾಪ್ಟರ್ 1' ಸಿನಿಮಾ ಬಜೆಟ್ ಸುಮಾರು ₹30 ಕೋಟಿ. ಅದು ಏನಿಲ್ಲವೆಂದರೂ ಹತ್ತು ಪಟ್ಟಿಗೂ ಹೆಚ್ಚು ಹಣ ಗಳಿಸಿದೆ. ಈ ಸಿನಿಮಾ ಬಗ್ಗೆ ಮಾತನಾಡುತ್ತಾ ನಿರ್ದೇಶಕ ಅನುರಾಗ್ ಕಶ್ಯಪ್ ಒಂದು ಮಾತು ಹೇಳಿದರು: 'ಬಾಲಿವುಡ್‌ನಲ್ಲಿ ಇಷ್ಟು ಬಜೆಟ್ ಅನ್ನು ಕೇವಲ ಹೇರ್ ಸ್ಟೈಲಿಸ್ಟ್‌ಗೆ ಕೊಡುತ್ತಾರೆ. ಮಲೆಯಾಳದಲ್ಲಿ ಅದೇ ದುಡ್ಡಿನಲ್ಲಿ ಒಂದಿಡೀ ಚಿತ್ರ ಮಾಡಿ ಮುಗಿಸಿ, ಮಾರುಕಟ್ಟೆಯೇ ಮಾತಾಡುವ ಹಾಗೆ ಮಾಡುತ್ತಾರೆ'. ಅವರು ಇತ್ತೀಚೆಗೆ ಹಿಂದಿ ಚಿತ್ರರಂಗವನ್ನು ವಿಪರೀತ ಟೀಕಿಸುತ್ತಾರೆನ್ನುವುದು ನಿಜವಾದರೂ, ಅವರಾಡಿದ ಮಾತಿನಲ್ಲಿ ಅರ್ಥ ಇದೆ. ಸೂಪರ್ ಸ್ಟಾರ್ ಶಾರುಕ್ ಖಾನ್ ಪುತ್ರಿ ಸುಹಾನಾ ಖಾನ್ ಕಳೆದ ವರ್ಷ 'ದಿ ಆರ್ಚೀಸ್' ಚಿತ್ರದ ಮೂಲಕ ಅಭಿನಯಿಸಲು ಪ್ರಾರಂಭಿಸಿದರು. ಅವರ ನಟನಾ ಕೌಶಲದ ಬಗ್ಗೆ ಮಿಶ್ರ ಪ್ರತಿಕ್ರಿಯೆಗಳು ಬಂದವು. ಆದರೆ, ಅವರ ಫ್ಯಾಷನ್ ಅಭಿರುಚಿಯ ಕುರಿತು ಮೆಚ್ಚುಗೆಯ ಮಹಾಪೂರವೇ ಹರಿಯಿತು. ಅವರು ಸ್ನೇಹಿತರ ಜೊತೆ ಭಾಗಿಯಾದ ಔತಣಕೂಟದ ಫೋಟೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು. ಅವರು ತೊಟ್ಟಿದ್ದ ಇಟಾಲಿಯನ್ ಬ್ರ್ಯಾಂಡ್ 'ಪ್ರಾದಾ' ಹೇರ್ ಕ್ಲಿಪ್ ಒಂದು ಫೋಟೊದಲ್ಲಿ ಇತ್ತು. ಅದರ ಬೆಲೆ ಆಗ ಸುಮಾರು ₹49 ಸಾವಿರ.



## ಪ್ರತಿಷ್ಠೆಗೂ ರಕ್ಷಣೆಗೂ...

ಗ್ರೀಕರು ಹಾಗೂ ರೋಮನ್ನರು ಬಹಳ ಹಳೆಯ ಕಾಲದಲ್ಲಿಯೇ ಹೇರ್ ಕ್ಲಿಪ್ ಅನ್ನು ಪ್ರತಿಷ್ಠೆ ಬಿಂಬಿಸುವ ಸಂಕೇತವನ್ನಾಗಿ ಬಳಸುತ್ತಿದ್ದರು. ಮಣ್ಣಿನಿಂದ ಮಾಡಿದ ಹೇರ್ ಕ್ಲಿಪ್ ತೊಟ್ಟವಳಿಗೂ ಚಿನ್ನದ ಹೇರ್ ಕ್ಲಿಪ್ ಹಾಕಿದವಳಿಗೂ ಅಜಗಜಾಂತರ. ಅವರ ತಲೆ ಮೇಲೆ ಕಣ್ಣಾಡಿಸಿಯೇ ಅವರ ಆರ್ಥಿಕ ಪರಿಸ್ಥಿತಿ ಏನು ಎಂದು ಅರಿಯುವ ಕಾಲ ಅದಾಗಿತ್ತು. ಪಚ್ಚೆಯಿಂದ, ಮುತ್ತಿನಿಂದ ಮಾಡಿದ ಹೇರ್ ಕ್ಲಿಪ್ ತೊಡುವುದು ಹಬ್ಬಗಳಲ್ಲಿ ಮಾಮೂಲಾಗಿತ್ತು. ಚೀನಾ ದೇಶದಲ್ಲಿ ಪಚ್ಚೆಯ ಕ್ಲಿಪ್ ತೊಡುವುದು ಶ್ರೇಷ್ಠ ಎಂಬ ನಂಬಿಕೆ ಇತ್ತು.

ಹೇರ್ ಕ್ಲಿಪ್‌ಗಳ ಕುರಿತು ಮಾತನಾಡುವಾಗ ಹೇರ್ ಪಿನ್‌ನ ಪರ್ಯಾಯ ಅನುಕೂಲಗಳನ್ನೂ ಗಮನಿಸಬಹುದು. ವಿಕ್ಟೋರಿಯನ್ ಕಾಲಘಟ್ಟದಲ್ಲಿ ಹೇರ್ ಪಿನ್‌ಗಳು

